# ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿನಾಂಕ: 02.12.2019 ರಂದು ಸಂಜೆ 04.00 ಗಂಟೆಗೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ.ಎನ್.ಸಿ. ಶ್ರೀನಿವಾಸ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು
2. ಶ್ರೀ.ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು
3. ಶ್ರೀ ಪಿ.ಜಿ. ವಿಜಯಕುಮಾರ್, ರಾಜ್ಯ ಮಾಹಿತಿ ಆಯುಕ್ತರು
4. ಶ್ರೀ.ಎಸ್.ಎಲ್. ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು
5. ಶ್ರೀ.ಹೆಚ್.ಪಿ. ಸುಧಾಮ ದಾಸ್, ರಾಜ್ಯ ಮಾಹಿತಿ ಆಯುಕ್ತರು
6. ಡಾ॥ ಕೆ.ಇ. ಕುಮಾರಸ್ವಾಮಿ, ರಾಜ್ಯ ಮಾಹಿತಿ ಆಯುಕ್ತರು
7. ಡಾ॥ ಲಿಂಗರಾಜ್ ಕೆ, ರಾಜ್ಯ ಮಾಹಿತಿ ಆಯುಕ್ತರು
8. ಶ್ರೀ. ಎಸ್.ಎಂ. ಸೋಮಶೇಖರ್, ರಾಜ್ಯ ಮಾಹಿತಿ ಆಯುಕ್ತರು
9. ಶ್ರೀ. ಕೆ.ಪಿ. ಮಂಜುನಾಥ, ರಾಜ್ಯ ಮಾಹಿತಿ ಆಯುಕ್ತರು
10. ಶ್ರೀಮತಿ ಎಸ್. ಕುಸುಮ ಕುಮಾರಿ, ಕಾರ್ಯದರ್ಶಿಗಳು

ಸಭೆಯ ಪ್ರಾರಂಭದಲ್ಲಿ ಕರ್ನಾಟಕ ಮಾಹಿತಿ ಆಯೋಗದ ಅಧೀನ ಕಾರ್ಯದರ್ಶಿ(ಪ್ರಭಾರ) ಶ್ರೀಮತಿ ಪಿ.ವಿ. ಮುದ್ದುರತ್ನಮ್ಮ ರವರು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರನ್ನು, ಮಾನ್ಯ ರಾಜ್ಯ ಮಾಹಿತಿ ಆಯುಕ್ತರುಗಳನ್ನು ಹಾಗೂ ಮಾನ್ಯ ಕಾರ್ಯದರ್ಶಿಯವರನ್ನು ಸಭೆಗೆ ಸ್ವಾಗತಿಸಿದರು.

ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:-

1. ಮಾನ್ಯ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ಈಗಾಗಲೇ ಆಯೋಗವು ಹಲವಾರು ಖಾಸಗಿ ಸಂಸ್ಥೆಗಳನ್ನು ಕಾಯ್ದೆಯ ಕಲಂ 2(ಹೆಚ್) ರಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರವೆಂದು ಘೋಷಿಸಿ ಆದೇಶಿಸಿದ್ದು, ಈ ಆದೇಶಗಳ ವಿರುದ್ಧ ಖಾಸಗಿ ಸಂಸ್ಥೆಗಳು ಮಾನ್ಯ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಆಯೋಗದ ಆದೇಶದ ವಿರುದ್ಧ ದಾವೆಯನ್ನು ಹೂಡಿ ತಡೆಯಾಜ್ಞೆಯನ್ನು ಪಡೆದಿದ್ದು ಮಾನ್ಯ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ತಡೆಯಾಜ್ಞೆಯನ್ನು ತೆರವುಗೊಳಿಸುವ ಬಗ್ಗೆ:-

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚಿಸಲಾಯಿತು. ಕರ್ನಾಟಕ ಮಾಹಿತಿ ಆಯೋಗವು ಮಾಹಿತಿ ಹಕ್ಕು ಅಧಿನಿಯಮ, 2005 ರ ಕಲಂ 2(ಹೆಚ್) ರಡಿಯಲ್ಲಿ ಮಾಡಿರುವ ಆದೇಶಗಳ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಹಲವಾರು ಪ್ರಕರಣಗಳಲ್ಲಿ ತಡೆಯಾಜ್ಞೆ ನೀಡಿರುತ್ತದೆ. ಇಂತಹ ಪ್ರಕರಣಗಳಲ್ಲಿ ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವ ಅವಶ್ಯಕತೆ ಇರುತ್ತದೆ ಎಂದು ಎಲ್ಲಾ ಆಯುಕ್ತರುಗಳು ಅಭಿಪ್ರಾಯ ಪಟ್ಟಿರುತ್ತಾರೆ. ಈ ಹಿನ್ನಲೆಯಲ್ಲಿ ಸದರಿ ಪ್ರಕರಣಗಳಲ್ಲಿ ಆಯೋಗದ ವಕೀಲರ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ರಾಜ್ಯ ಮಾಹಿತಿ ಆಯುಕ್ತರಾದ ಶ್ರೀ ಎನ್.ಪಿ. ರಮೇಶ್ ರವರಿಗೆ ಅಧಿಕಾರ ನೀಡಲಾಯಿತು. ಈ ಸಂಬಂಧ ಅವಶ್ಯಕ ಅಂಕಿ